479

ಫಿನಾನ್ಷಿಯಲ್ ಇಲಾಖಾ.

ಸ್ಟೇಟ್ ಫಾರೆಸ್ಟ್ ಹುಟ್ಟುವಳಿಯನ್ನು ಕುರಿತು ಫಾರೆಸ್ಟ್ ಆಫಿಸರ್‌ಗಳ ಅಡ್ವೈಸ್‌ಗಳು ತಾಲ್ಲೂಕು ಟ್ರೇಜರಿ ಲೆಕ್ಕಗಳಿಗೆ ಜಂಟಿಸಲ್ಪಡತಕ್ಕ ವಿಷಯ.

ತಾರೀಖು 3ನೇ ನವಂಬರ್ 1876. ಸರ್ಕ್ಯುಲರ್ ನಂಬರ್ 1096.

ಡಿಸ್ಟ್ರಿಕ್ಟ್ ಟ್ರೇಜರಿಗಳ ಆಫಿಸರ್‌ಗಳಿಗೆ.

ತಮ್ಮತಮ್ಮ ಡಿಸ್ಟ್ರಿಕ್ಟ್‌ನಲ್ಲಿರತಕ್ಕ ಅಮಲ್ದಾರ್‌ಗಳು ಅವರುಗಳಿಗೆ ಫಾರೆಸ್ಟ್ ಆಫಿಸರ್‌ಗಳಿಂದ ಕಳುಹಿಸಲ್ಪಡತಕ್ಕ ಸ್ಟೇಟ್ ಫಾರೆಸ್ಟ್ ಹುಟ್ಟುವಳೀ ಬಾಬತು ಅಡ್ವೈಸ್‌ಗಳನ್ನು ಸದರೀ ಹುಟ್ಟುವಳಿ ಮೊಬಲಗ್ ಜಮೇ ಕಟ್ಟಲ್ಪಡುವ ತಾಲ್ಲೂಕು ಟ್ರೇಜರಿ ಲೆಕ್ಕಕ್ಕೆ ತಪ್ಪದೆ ಜಂಟಿಸತಕ್ಕದ್ದೆಂದು ಅವರುಗಳಿಗೆ ಅಪ್ಪಣೆ ಕೊಡತಕ್ಕ ಬಗ್ಗೆ ಡೆಪ್ಯೂಟಿ ಅಕ್ಕೌಂಟೆಂಟ್ ಜನರಲ್ ಯವರು ಡಿಸ್ಟ್ರಿಕ್ಟ್ ಟ್ರೇಜರಿ ಆಫಿಸರ್‌ಗಳನ್ನು ಕೋರುತ್ತಾರೆ.

H. HUDSON,
Dy. Acctt. General in Mysore.

ರಿಜಿಸ್ಟ್ರೇಷ್ಣ ಇಲಾಖಾ.

ಸಬ್‌ರಿಜಿಸ್ಟ್ರಾರವರ ಗುಮಾಸ್ತೇಗಳಿಗೆ ರುಸುಂ.

1876—77ನೇ ಇಸವಿಯ 5ನೇನಂಬರ್ ಸರ್ಕ್ಯುಲರ್.

ಮೈಸೂರು ಶೀಮೆಯ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ಗಳಿಗೆ:—ಮೈಸೂರು ಶೀಮೆಯಲ್ಲಿರುವ ಸಬ್ ರಿಜಿಸ್ಟ್ರೇ ಆಫಿಸ್‌ಗಳ ಗುಮಾಸ್ತೇಗಳಿಗೆ ಸಲ್ಲತಕ್ಕ ರಿಮ್ಯುನಿರೇಷ್ಣ (ಯಾನೆ ರುಸುಂ) ವಿಷಯದಲ್ಲಿ (1874ನೇ ಜೂ 6ನೇ ವರ್ತಮಿನ ಮೈಸೂರು ಗೆಜೆಟ್‌ನಲ್ಲಿ ಪ್ರಾಯಿಷಾದ) 1874—75ನೇ ಇಸವಿ 1ನೇ ನಂಬರ್ ಉಳ್ಳ ಈ ಆಫಿಸಿನ ಸರ್ಕ್ಯುಲರನ್ನು ಕುರಿತು ರಿಜಿಸ್ಟ್ರೇಷ್ಣ ಇನ್‌ಸ್ಪೆಕ್ಟರ್ ಜನರಲ್ ಯವರು ಚೀಫ್ ಕಮ್ಮಿಷನರವರ ಮಂಜೂರಾತೀ ನಿಶೀ ಪ್ರಕಟಿಸುವದೇನಂದರೆ—1876ನೇ ಅಕ್ಟೋಬರ್ ಗುರ್ತೀತಾರೀಕ್ ಲಗಾಯ್ತು ಇದರಡಿ ಕಂಡ ತಾಲ್ಲೂಕುಗಳ ಸಬ್ ರಿಜಿಸ್ಟ್ರಾರ್‌ಗಳು, ತಾವು ತೆಗದುಕೊಳ್ಳುವ ಸೇಕಡಾ 40ರ ಬಾಬತು ಕಮ್ಮಿಷ್ಣನಲ್ಲಿ ಇವ್ಮ ಗುಮಾಸ್ತೆಗಳಿಗೆ ಈ ಕೆಳಗೆ ಕಂಡ ಲೌಸ್‌ಗಳನ್ನು ಕೊಡತಕ್ಕದ್ದು. ಕಮ್ಮಿಷ್ಣ ಮೊಬಲಗ್ ಮಾಹೇಯಾನಾ 10ರ [redacted] ಯಿಗಳಿಗೆ ಮೀರದೇ ಯಿರುವ ಯಿತರ ದರೋಬಸ್ತು ಆಫಿಸ್‌ಗಳೊಳಗೂ ಸದರೀ ವಿಷ್ಟ್ಯವೊಬಲಗೂ ಗುಮಾಸ್ತೇಗಳಿಗೆ ಕೊಡಲ್ಪಡತಕ್ಕದ್ದೆಂದು ಚೀಫ್ ಕಮ್ಮಿಷನರವರು ನಿಯಮಿಸುತ್ತಾರೆ. ಯಾವ ತಿಂಗಳಲ್ಲಿಯಾಗಲಿ, ಕಮ್ಮಿಷ್ಣ ಮೊಬಲಗ್ ಮಂಜೂರಾದ ಲೌಸಿಗೆ ಕಮ್ಮೀ ಬಿದ್ದರೆ ಆಗ ಕಡಮೆಯಾದ ಭಾಗವು, ಆತರುವಾಯದ ಮಾಹೆಗಳಲ್ಲಿ ವಸೂಲಾದ ಕಮ್ಮಿಷ್ಣನಿಂದ ಭರ್ತೀಮಾಡತಕ್ಕದ್ದು.

ಡಿಸ್ಟ್ರಿಕ್ಟ್	ತಾಲ್ಲೂಕು	ಮಾಹೇವಾರೀ ಲೌಸ್, ರೂ.
ಮೈಸೂರು	ಯೆಡತೊರೆ	20
	ತಲಕಾಡು	20
	ಹುಣಸೂರು	10
ತುಮಕೂರು	ತುಮಕೂರು	10
	ಸೀರಾ	10
ಕೋಲಾರ	ಚಿಕ್ಕಬಳ್ಳಾಪುರ	12
	ಕೋಲಾರ	10
ಹಾಸನ.	ಮಂಜರಾಬಾದ್	10
	ಅರಕಲ್‌ಗೂಡ	10
	ಅತ್ತಿಗುಪ್ಪೆ	12
	ಬೇಲೂರು	10
ಕಡೂರು	ಚಿಕ್ಕಮಗಳೂರು	20ರ ಪ್ರಕಾರ 10ರ ಪ್ರಕಾರ
	ಕೊಪ್ಪ	15
	ತರೀಕೆರೆ	10
ಶಿವಮೊಗ್ಗ	ಲಕ್ಕವಳ್ಳಿ	10
	ಶಿವಮೊಗ್ಗ	10
	ಕವಲೇದುರ್ಗ	12

H. HUDSON,
Inspector General of Registration.